MADAM SPEAKER.— The question is :—

"That this House hereby approv s the Cotton Transport (Mysore) (Amendment) Rules, 1973 proposed to be issued by the State Government under section 7 of the Cotton Transport Act, 1923 (Central Act 3 of 1923), the draft of which has been laid before this House on 30th March 1973."

The motion was adopted unanimously.

Re : Dharana of Officers of the Mysore Iron and Steel Ltd., Bhadravathi.

ಶ್ರೀ. ಎಚ್. ಟಿ. ಕೃಷ್ಣಪ್ಪ (ನಾಗಮಂಗಲ).— ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ಹೆಮ್ಮೆಯ ಊರು ಎನಿಸಿಕೊಂಡಿರತಕ್ಕ ಭದ್ರಾವತಿ ಕಬ್ಬಿಣ ಕಾರ್ಖಾನೆ ಈ ಈ ದಿವಸ ಕೆಲಸದಿಂದ ಮಾಡದೆ ನಿಷ್ಕ್ರಿಯಗೊಂಡಿದೆ. ನಾನು ರೂಲ್ ೫೮ರ ಪ್ರಕಾರ ಒಂದು ಸೂಚನೆಯನ್ನು ಕಳುಹಿಸಿದ್ದೀನಿ. ಅದರ ಬಗ್ಗೆ ಸಂಕ್ಷಿಪ್ತವಾಗಿ ಹೇಳುವದಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಸುಮಾರು ೪೦೦ ಜನ ನೌಕರರು ಈ ದಿವಸ ಧರಣಿ ಮುಷ್ಕರ ಕೂತಿದ್ದಾರೆ.

†Sri S. M. KRISHNA (Minister for Industries) .—Madam Speaker if I may be permitted to intervene, before the hon. the Leader of the Opposition attemts to make certain points, I wish to state th t I have the latest message from Bhadravati, which would certainly help the deliberations of the House. With this, I am not coming in his way of making whatever points he wants to make. If it helps matters, I may be permitted to read the message, which says.

"That all the officers have decided unanimously to resume their work from 3-00 P.M. today to 6-30 P. M. and from tomorrow they will be working according to usual hours."

2-00 P. M.

ಶ್ರೀ ಎಚ್. ಟಿ. ಕೃಷ್ಣಪ್ಪ.— ನಿನ್ನೆ ದಿವಸ ಧರಣಿ ಮುಷ್ಕರವಾಯಿತು. ಈ ದಿವಸ ಪ್ರವೇಶಕ್ಕೆ ಅಡ್ಡಿ ಮಾಡಿ ಪೋಲೀಸ್ ಕಾವಲು ಹಾಕಿದ್ದಾರೆ. ಪರಿಸ್ಥಿತಿ ಗಂಭೀರವಾಗಿದೆ.

ಅಧ್ಯಕ್ಷರು.— ಆ ಪರಿಸ್ಥಿತಿ ಈಗ ಇಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಯಾತಕ್ಕೋಸ್ಕರ ಹೀಗೆ ಆಯಿತು. ಇಬ್ಬರು ಕಿರಿಯ ಅಧಿಕಾರಿಗಳಾದ ಶ್ರೀ ಸಣ್ಣತಿಪ್ಪಯ್ಯ ಮತ್ತು ಶ್ರೀ ಚಿಕ್ಕಬೆರಸ್ ಎಂಬುವವರನ್ನು ೧೫೦ ಹಿರಿಯ ಅಧಿಕಾರಗಳನ್ನು ಕಡೆಗಣಿಸಿ ಮೇಲೆ ಹಾಕಿದ್ದಾರೆ.

ಅಧ್ಯಕ್ಷರು.— ಅದರ ಬಗ್ಗೆ ರೂಲ್ ೩೧೨ರ ಪ್ರಕಾರ ನೋಟೀಸ್ ಕಳುಹಿಸಿದ್ದೀರಿ, ಸಾಯಂಕಾಲ ತೆಗೆದುಕೊಳ್ಳಬಹುದು.

ಶ್ರೀ ಎಚ್. ಟಿ. ಕೃಷ್ಣಪ್ಪ — ನೇರವಾಗಿ ವಿಷಯಗಳನ್ನು ಪ್ರಸ್ತಾಪ ಮಾಡಿದರೆ ಮಾನ್ಯ ಮಂತ್ರಿಗಳಿಗೆ ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಸ್. ಎಂ. ಕೃಷ್ಣ.— ಮಾನ್ಯ ಅಧ್ಯಕ್ಷರೇ, ಇದು ವಿಶೇಷವಾಗಿ ಚರ್ಚೆಗೆ ಯೋಗ್ಯವಾದ ವಿಚಾರವಲ್ಲ. ಇಷ್ಟು ಮಾತ್ರ ಹೇಳಬಯಸುತ್ತೇನೆ....

Sri ABDUL KHUDUS ANWAR.— This is a question of 2000 employees remaining outside.

Sri S. M. KRISHNA.— It is not at all concerning 2000 employees. I do not know where my distinguished friend, Mr. Khudus Anwar has got this information. As the Leader of the Opposition very rightly put it, this concerns about 200 or 300 Officers. There are 400 Officers out of which some of them have disassociated with this move. Certainly it boils to 200 or 300 Officers only. Let me assure this House that no Company worth the name even with the modicum of discipline could subject themselves to such a thing.

ಅಧ್ಯಕ್ಷರು.— ಮಂತ್ರಿಗಳು ಇದರ ಬಗ್ಗೆ ಸಾಯಂಕಾಲ ಸ್ಟೇಟ್‌ಮೆಂಟ್ ಮಾಡಬಹುದು.

ಶ್ರೀ ಎಚ್. ಎಸ್. ಸಿದ್ದಪ್ಪ.— ತಳನೇ ತಾರೀಖು ರಾಯಚೂರಿನ ಶ್ರೀ ಬಿ. ಜಿ ನಾರಾಯಣಗೌಡ ಪೂಲ್ ಆಫೀಸರ್, ಲ್ಯಾಂಡ ಡವಲಪ್‌ಮೆಂಟ್— ಅದರ ಬಗ್ಗೆ ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೇನೆ. ಅದಕ್ಕೆ ಇನ್ನೂ ಉತ್ತರ ಬರಲಿಲ್ಲ.

ಅಧ್ಯಕ್ಷರು — ನಾಳೆಯ ದಿನ ಬರುತ್ತದೆ.

Re : Giving protection to ryots.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).— ಕಳೆದ ಅಧಿವೇಶನದಲ್ಲಿ ಭೂ ಸುಧಾರಣೆ ಮಸೂದೆ ಅಂಗೀಕಾರವಾಗಿ ಅದು ಈಗ ರಾಷ್ಟ್ರಾಧ್ಯಕ್ಷರ ಮುಂಜೂರಾತಿ